# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಯಳಂದೂರು.

**C.C No.** 174/2019

| | | |
|---|---|---|
| ಸಾಕ್ಷಿದಾರರ ಹೆಸರು: | ಪರಮೇಶ್ವರ್ ಎಲ್ ಎನ್ | ಪ್ರಮಾಣ ಮಾಡಿದ ದಿನಾಂಕ 04.06.2026. |
| ತಂದೆಯ ಹೆಸರು: | ನಿಂಗೇಗೌಡ | |
| ವಯಸ್ಸು: | 38 ವರ್ಷ | |
| ವೃತ್ತಿ: | ಉಪ ವಲಯ ಅರಣ್ಯಾಧಿಕಾರಿ | Complainant witness No.4 |
| ವಾಸಸ್ಥಳ: | ಚಾಮರಾಜನಗರ | PW–5 |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ನಾನು 2011 ರಿಂದ 2020 ನೇ ಸಾಲಿನ ವರೆಗೆ ಅರಣ್ಯ ರಕ್ಷಕನಾಗಿ ಯಳಂದೂರು ರಕ್ಷಣಾ ವಲಯ ಅರಣ್ಯ ಇಲಾಖೆಯಲ್ಲಿ ಕೆಲಸವನ್ನು ನಿರ್ವಹಿಸಿದ್ದೆ.

ದಿನಾಂಕ 04.10.2012 ರಂದು ಸಾಕ್ಷಿ ನಂ.1 ರಿಂದ 3 ಮತ್ತು 5 ರವರ ಜೊತೆಗೆ ನಾನು ಕೃಷ್ಣಯ್ಯನಕಟ್ಟೆಡ್ಯಾಂ ಬಳಿ ಗಸ್ತು ಮಾಡುತ್ತಿದ್ದಾಗ ಬೆಳಗಿನ ಜಾವ 4 ಗಂಟೆಗೆ ಯಾರೋ ವ್ಯಕ್ತಿಗಳು ಟಾರ್ಚ್ ಬೆಳಕಿನ ಸಹಾಯದಿಂದ ಓಡಾಡುತ್ತಿರುವುದು ಕಂಡು ಬಂದಿರುತ್ತದೆ. ನಾವು 5 ಜನರು ಸೇರಿ ತಲಕಾಮನಗುಡ್ಡದ ಹತ್ತಿರ ಅವರುಗಳನ್ನು ಸುತ್ತುವರಿಯುತ್ತೇವೆ. ಕತ್ತಲು ಇದ್ದ ಕಾರಣದಿಂದ ನಮಗೆ ಎಲ್ಲರನ್ನು ಹಿಡಿಯಲು ಆಗಿರುವುದಿಲ್ಲ ಕೇವಲ ನಾಗಶೆಟ್ಟಿ ಎಂಬುವವನು ಒಬ್ಬನು ಸಿಕ್ಕಿಹಾಕಿಕೊಳ್ಳುತ್ತಾನೆ. ನಾವು ಅವನನ್ನು ಹಿಡಿದು ವಿಚಾರಿಸಿದಾಗ ಅವನ ಜೊತೆ ಇದ್ದ 3 ಜನ ಹೆಸರುಗಳನ್ನು ತಿಳಿಸಿರುತ್ತಾನೆ, ಅವರುಗಳ ಹೆಸರು ಪುಟ್ಟಸ್ವಾಮಿ, ಸೋಮಣ್ಣ ಮತ್ತು ಶಿವಹಟ್ಟಿ @ ಶಿವಣ್ಣ ಎಂದು ನಮಗೆ ನಾಗಶೆಟ್ಟಿಯು ತಿಳಿಸಿರುತ್ತಾನೆ. ನಾಗಶೆಟ್ಟಿಯ ಬಳಿ ತಲೆಯಲ್ಲಿ ಒಂದು ಟಾರ್ಚ್, ಒಂದು ನಾಡಬಂದೂಕು, 1 ಬ್ಯಾಟರಿ, ಒಂದು ಮಚ್ಚು ಮತ್ತು ಒಂದು ಗೋಣಿಚೀಲ ಹಾಗೂ ಮತ್ತೊಂದು ಪಾಸ್ಟಿಕ್ ಚೀಲ ಸಿಕ್ಕಿರುತ್ತದೆ. ಪೊದೆಯಲ್ಲಿ ನಾಗಶೆಟ್ಟಿಯು ಒಂದು **TVS** ಬೈಕ್ ನ ಸಂಖ್ಯೆ ಕೆಎ 11 ಜೆ 6763 ಸಂಖ್ಯೆಯ ಬೈಕ್ ನಿಲ್ಲಿಸಿದ್ದನು ಇಷ್ಟು ವಸ್ತುಗಳನ್ನು ನಾವು ಜಪ್ತು ಪಡಿಸಿಕೊಂಡಿರುತ್ತೇವೆ. ಯಾವ ಕಾರಣಕ್ಕಾಗಿ ಇಲ್ಲಿಗೆ

ಬಂದಿರುತ್ತೀರಿ ಎಂದು ನಾವು ವಿಚಾರಿಸಿದಾಗ ಅವನು ಕಾಡು ಪ್ರಾಣಿಗಳ ಮಾಂಸದ ಸಲುವಾಗಿ ಕಾಡು ಪ್ರಾಣಿಗಳನ್ನು ಭೇಟೆಯಾಡಲು ಬಂದಿರುವುದಾಗಿ ನಮಗೆ ತಿಳಿಸಿರುತ್ತಾನೆ. ಆರೋಪಿತರು ಮೇಲ್ನೋಟಕ್ಕೆ ಅಪರಾಧವನ್ನು ಎಸಗಿರುವುದು ಕಂಡು ಬಂದ ಕಾರಣ ನಾವು ನಾಗಶೆಟ್ಟಿಯನ್ನು **RFO** ಕಛೇರಿ ಯಳಂದೂರಿಗೆ ಕರೆದುಕೊಂಡು ಬಂದಿರುತ್ತೇವೆ. ನಾವು ಮಹಜರ್ ನ್ನು ಬೆಳಗಿನ ಜಾವ 4–30 ರಿಂದ 6 ಗಂಟೆಯ ವರೆಗೆ ಜರುಗಿಸಿ ಮೇಲೆ ಕಾಣಿಸಿದ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುತ್ತೇವೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದಿರುವ ಮುದ್ದೇಮಾಲುಃ–1 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಸ್ಥಳ ಮಹಜರನ ದೃಢೀಕೃತ ನಕಲನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದ್ದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–1(ಇ) ಎಂದು ಗುರುತಿಸಲಾಯಿತು. ಸಾಕ್ಷಿ ನಂ.–2 ರವರು ಸಾಕ್ಷಿ ನಂ.–1 ರವರ ಉಕ್ತಲೇಖನದಂತೆ ನಿಪಿ–1ನ್ನು ಬರೆದಿರುತ್ತಾರೆ.

**(Since this is an evidence recorded before framing of charge as per Section 244 of Cr.PC, there cannot be any cross examination at this stage)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.